# ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ (ರಿ),ಚಿತ್ರದುರ್ಗ

**DRCT/SOR/REG-NO:253/2019-20**

**(ಮಹಿಳೆಯರ ಮತ್ತು ಮಕ್ಕಳ, ಹಿರಿಯ ನಾಗರೀಕರ, ವಿಕಲಚೇತನರ, ಶೋಷಿತ ದುರ್ಬಲ ವರ್ಗದವರ ಸರ್ವತೋಮುಖ ಅಭಿವೃದ್ಧಿಗಾಗಿ ನಿಯೋಜಿತ ಸಂಸ್ಥೆ)**

## ಕಾಯಕವೇ ಕೈಲಾಸ

# 2019–20ರ ವಾರ್ಷಿಕ ವರದಿ

ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ (ರಿ)
ರೈಲ್ವೆನಿಲ್ದಾಣದ ಹತ್ತಿರ, ಚಿತ್ರದುರ್ಗ
ಕರ್ನಾಟಕ ರಾಜ್ಯ 577501
ಫೋನ್ ಸಂ: 9741883605–8217800483,
**E-mail:**asssamsthe@gmail.com

**"ನಿಮ್ಮ ಕೈಲಾದ ಸಹಾಯ ನೀವು ಮಾಡಿರಿ ಮನುಕುಲದ ಒಳಿತಿಗಾಗಿ"**

# ದೂರದೃಷ್ಟಿ (ವಿಷನ್)

ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯು 2019–20 ರಿಂದ ಏಳು ಜನ ಪುರುಷರು ಮತ್ತು ಎರಡು ಜನ ಮಹಿಳಾ ಪದಾಧಿಕಾರಿಗಳೊಂದಿಗೆ ಒಟ್ಟು ಒಂಬತ್ತು ಜನ ಪದಾಧಿಕಾರಿಗಳೊಂದಿಗೆ ಸಂಸ್ಥೆಯನ್ನು ರಚಿಸಿಕೊಂಡು ಮಹಿಳೆಯರ ಮಕ್ಕಳ, ವಿಕಲಚೇತನರ, ಹಿರಿಯನಾಗರಿಕರ ಆರೋಗ್ಯ ತಪಾಸಣೆ, ಪಾಲನೆ–ಪೋಷಣೆ ಸಂರಕ್ಷಣೆ ಕಾನೂನು ಪುನರ್ವಸತಿ ಕಲ್ಪಿಸಿ ಸಾಮಾಜಿಕ ಶೈಕ್ಷಣಿಕ, ಆರ್ಥಿಕ, ರಾಜಕೀಯ ಕ್ಷೇತ್ರಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ಸರ್ವತೋಮುಖ ಸಬಲೀಕರಣಗೊಳಿಸುವುದಕ್ಕಾಗಿ ನಮ್ಮ ಸಂಸ್ಥೆಯು ದೂರದೃಷ್ಟಿ.

# ಧ್ಯೇಯೋದ್ದೇಶ (ಮಿಷನ್)

1. ಮಹಿಳೆಯರಲ್ಲಿ ಪ್ರಥಮವಾಗಿ ಶಿಕ್ಷಣ, ಆರೋಗ್ಯ ಸಾಮಾಜಿಕ, ಆರ್ಥಿಕ ಸಾಮರ್ಥ್ಯ, ಪರಿಸರ ನೈರ್ಮಲ್ಯ, ಕೌಶಲ್ಯ ಅಭಿವೃದ್ಧಿ ಆದಾಯೋತ್ಪನ್ನ ಕೃಷಿ, ಹೈನುಗಾರಿಕೆ ಚಟುವಟಿಕೆಗಳ ಬಗ್ಗೆ ಅರಿವನ್ನು ಮೂಡಿಸುವುದು ಸಾಂಸ್ಕೃತಿಕವಾಗಿ ಸಬಲೀಕರಣಗೊಳಿಸುವುದಾಗಿದೆ.
2. ರಾಜ್ಯ ಹಾಗೂ ಕೇಂದ್ರ ಸರ್ಕಾರದ ಹಾಗೂ ವಿವಿಧ ಸಂಘ ಸಂಸ್ಥೆಗಳ ಹಾಗೂ ವ್ಯಕ್ತಿಗಳ ನೆರವಿನಿಂದ ಮಹಿಳೆಯರ ಮತ್ತು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಸಮಾಜದಲ್ಲಿ ನ್ಯಾಯಬದ್ಧವಾಗಿ ಸಮಾನತೆಯನ್ನು ಹೊಂದಲು ಮಹಿಳೆಯರ ಮತ್ತು ಮಕ್ಕಳ ಹಕ್ಕುಗಳನ್ನು ರಕ್ಷಿಸಲು ರೂಪಿಸಿರುವ ಕಾಯ್ದೆಗಳು ಮತ್ತು ಅಧಿನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ ಮದ್ಯಪಾನ ನಿಷೇಧ, ತಂಬಾಕು ನಿಷೇಧ, ವಿವಿಧ ಶೋಷಣೆಗಳಾದ ಮಹಿಳೆಯರ ಮಾರಾಟ ಮತ್ತು ಸಾಗಾಣಿಕೆ ತಡೆಗಟ್ಟುವುದು, ಹೆಚ್.ಐ.ವಿ. ಸೋಂಕಿತ ಮಹಿಳೆಯರು, ಬಾಲ್ಯವಿವಾಹ, ದೇವದಾಸಿ ಪದ್ಧತಿ, ವರದಕ್ಷಿಣೆ ಕಿರುಕುಳ, ದೌರ್ಜನ್ಯ, ಅತ್ಯಾಚಾರ, ಮಾನಸಿಕ, ದೈಹಿಕ, ಲೈಂಗಿಕ ವೃತ್ತಿ, ನಿರಾಶ್ರಿತರು ಅಲೆಮಾರಿಗಳ ಮಹಿಳೆಯರನ್ನು ಸಂಕಷ್ಟ ಪರಿಸ್ಥಿತಿಯಿಂದ ರಕ್ಷಿಸಿ ಅವರಿಗೆ ಪುನರ್ವಸತಿ, ರಕ್ಷಣೆ, ಕಾನೂನು ನೆರವು, ವೈದ್ಯಕೀಯ ಸೌಲಭ್ಯ, ಶಿಕ್ಷಣ, ಕೌಶಲ್ಯಾಭಿವೃದ್ಧಿ ತರಬೇತಿ ನೀಡಿ ಆರ್ಥಿಕ ಸಹಾಯದೊಂದಿಗೆ ಸ್ವ–ಉದ್ಯೋಗ ಸ್ವಾವಲಂಬಿ ಜೀವನ ಮಾಡಲು ಎಲ್ಲರಂತೆ ನಾವು ನಮ್ಮಂತೆ ಎಲ್ಲರು ಎಂಬುದನ್ನು ಸಾಬೀತು ಪಡಿಸುತ್ತೇವೆ.
3. ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಇರುವ ಕಾಯ್ದೆಗಳನ್ನು, ಕಾರ್ಯನೀತಿಗಳನ್ನು, ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಹಾಗೂ ನಿರ್ದಿಷ್ಟ ಗುರಿಗಳನ್ನು ತಲುಪಲು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಾಯದಿಂದ ಮಹಿಳಾ ಸಬಲೀಕರಣಕ್ಕಾಗಿ ಹೋರಾಡುವುದು ಬುದ್ಧಿ ಜೀವಿಗಳು, ಸಾಹಿತಿಗಳು, ಪತ್ರಿಕಾ ಮಾಧ್ಯಮಗಳು, ಟೆಲಿವಿಷನ್‌ಗಳು, ಸ್ತ್ರೀಶಕ್ತಿ ಸಂಘಗಳು, ಸರ್ಕಾರೇತರ ಸಂಸ್ಥೆಗಳು ಮಾರ್ಗದರ್ಶನ ಮುಂದಾಲೋಚನೆ, ಹಾಗೂ ಕಲಾಕಾರರ ಉತ್ತೇಜನದಿಂದ ಸಮಗ್ರ ಮಹಿಳೆಯರ ಮತ್ತು ಮಕ್ಕಳ, ಹಿರಿಯನಾಗರೀಕರ ಹಾಗೂ ವಿಕಲಚೇತನರ, ಅನಾಥ ಮಕ್ಕಳ ಅಭಿವೃದ್ಧಿಗಾಗಿ ನಮ್ಮ ಸಂಸ್ಥೆ 2019–20 ರಿಂದ 24X7 ಕಾರ್ಯನಿರ್ವಹಿಸುತ್ತಿದೆ

## ಕಾರ್ಯಕ್ಷೇತ್ರ

ಸಂಸ್ಥೆಯು ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ, ಹೊಸದುರ್ಗ, ಹೊಳಲ್ಕೆರೆ, ಮೊಳಕಾಲ್ಮೂರು, ಹಿರಿಯೂರು ಹಾಗೂ ಚಳ್ಳಕೆರೆ ತಾಲ್ಲೂಕುಗಳಲ್ಲಿ ನೊಂದ ಮಹಿಳೆಯರ ಮತ್ತು ಮಕ್ಕಳ, ಮಾರಾಟ ಮತ್ತು ಸಾಗಾಣಿಕೆಗೊಳಗಾದ ಮಹಿಳೆಯರು ಮತ್ತು ಮಕ್ಕಳು, ವಿಕಲಚೇತನರು, ಹಿರಿಯನಾಗರಿಕರು, ದುರ್ಬಲ ವರ್ಗದವರು, ಅನಾಥ ಮಕ್ಕಳು ಹಾಗೂ ಪರಿಸರ ಸ್ವಚ್ಛತೆ, ಭ್ರೂಣ ಹತ್ಯೆ, ಲಿಂಗತಾರತಮ್ಯ ಮತ್ತು ಮಾದಕ ಮದ್ಯ/ದ್ರವ್ಯ ನಿಷೇಧಿಸುವ ಬಗ್ಗೆ ಸರ್ವಾಂಗೀಣ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿದೆ.

**"ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸಿರಿಯೆ"**

~~~***~~~

ದೇಶದಲ್ಲಿ ನಡೆ0ಯುತ್ತಿರುವ ಸರ್ಕಾರ ಹಾಗೂ ಸರ್ಕಾರೇತರ ಅಭ0ಯದಾನದ ಪರಂಪರೆ0ಯಲ್ಲಿ ಎಲ್ಲಾ ದುರ್ಬಲರಿಗೂ ಅಭ0ಯ ಸಿಗಬೇಕೆಂಬ ಉದ್ದೇಶ ಇಟ್ಟುಕೊಂಡು ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯು 21 ನೇ ಶತಮಾನದ ಕಾಲಕ್ಕೆ ತಕ್ಕಂತೆ ತನ್ನ ಕರ್ತವ್ಯಗಳನ್ನು ಜನರ ಬದಲಾವಣೆಗೆ ರೂಪಿತವಾಗಿರುತ್ತದೆ. ಸರ್ಕಾರ ಸರ್ಕಾರೇತರ ಸಂಸ್ಥೆಗಳ ಸಹಭಾಗಿತ್ವದಲ್ಲಿ ಕ್ಲಿಷ್ಟಕರ ಸಮಸ್ಯೆಗಳ ಪರಿಹಾರಕ್ಕಾಗಿ 0ಯೋಜನೆಗಳನ್ನು ರೂಪಿಸಲಾಗುತ್ತಿದೆ ಮಹಿಳೆ0ಯರ ಮತ್ತು ಮಕ್ಕಳ, ಹಿರಿ0ಯನಾಗರಿಕರ ವಿಕಲಚೇತನರ ಮದ್ಯವ್ಯಸನಿಗಳ ನಿರ್ಗತಿಕ ಕಡುಬಡ ಮಕ್ಕಳ ಸರ್ವತೋಮುಖ ಬದಲಾವಣೆಗೆ ಕ್ರಿ0ಯಾ0ಯೋಜನೆ ರೂಪಿಸುವುದು. ಸಮಾಜದಲ್ಲಿ ಒಳಿತನ್ನು ಬ0ಯಸುವ ಎಲ್ಲರ ಜೊತೆ0ಯಲ್ಲಿ ಸೇರಿಕೊಂಡು ಅಭಿವೃದ್ಧಿ0ಯ ಹೆಜ್ಜೆಗಳನ್ನಿರಿಸುತ್ತಿರುವುದು 0ಯೋಜನೆ0ಯ ಇನ್ನೊಂದು ವೈಶಿಷ್ಠತೆ0ಯಾಗಿದೆ.

ನಮ್ಮ ಆಡಳಿತ ಮಂಡಳಿ, ಸಿಬ್ಬಂದಿವರ್ಗ ಸಮಾಜದ ಎಲ್ಲ ಜನರನ್ನು ಗೌರವದಿಂದ ಕಾಣುತ್ತಾ ಜನಪ್ರತಿನಿಧಿಗಳು ಮತ್ತು ಸರ್ಕಾರದ ಹಾಗೂ ಸರ್ಕಾರೇತರ ಅಧಿಕಾರಿ ವರ್ಗದವರೊಡನೆ ಆತ್ಮೀ0ಯತೆಯಿಂದ ಬೇರೆ0ಯುತ್ತಾ ಸರ್ಕಾರದ 0ಯೋಜನೆಗಳನ್ನು ಜನರಿಗೆ ಮುಟ್ಟಿಸುವಲ್ಲಿ ನೆರವಾಗುತ್ತಾ ಮಾನವತಾವಾದಿ ಬಸವಣ್ಣನವರ ವಚನಗಳಂತೆ 'ಇವನಾರವ ಇವನಾರವ ಎಂದೆನಿಸದಿರು, ಇವ ನಮ್ಮವ ಇವ ನಮ್ಮವ ಎಂದೆನಿಸ0ಯ್ಯ' ಎಂಬ ನಾಡುನುಡಿ0ಯಂತೆ ಸಮಾಜದಲ್ಲಿ ಹಲವಾರು ಕ್ಲಿಷ್ಟಕರ ಸಮಸ್ಯೆಗಳನ್ನು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಅನುಭವಿಸುತ್ತಿರುವ ಜನರ ಬಳಿಗೆ ಹೋಗಿ ಆಪ್ತಸಮಾಲೋಚನೆ ಕಾನೂನು ನೆರವು, ರಕ್ಷಣೆ ಪುನರ್ವಸತಿ, ಕೌಶಲ್ಯಾಧರಿತ ವೃತ್ತಿ ತರಬೇತಿ, ದುಶ್ಚಟಗಳಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಪ್ರಕೃತಿ0ಯ ನೈಸರ್ಗಿಕ ಸಂಪತ್ತು ಬಳಕೆ ಉಪ0ಯೋಗ ರಕ್ಷಣೆ ಬಗ್ಗೆ ಉದಾ: ನೀರು, ಕೃಷಿ, ಭೂಮಿ, ಆರೋಗ್ಯ ಹಾಗೂ ವನ್ಯಜೀವಿಗಳ ರಕ್ಷಣೆ ಮತ್ತು ಇವತ್ತಿನ ವೈಜ್ಞಾನಿಕ ಜಗತ್ತಿನಲ್ಲಿ ಕ್ರಿ0ಯಾ0ಯೋಜನೆ ತ0ಯಾರಿಸಿ ಅತಿ ವೇಗದ ಬೆಳವಣಿಗೆಯಿಂದ ಮನುಷ್ಯ ಹಾಗೂ ಪ್ರಾಣಿ ಸಂಕುಲನ ಅತಿ ಬೇಗ ನಾಶವಾಗುತ್ತಿದೆ.

ಇಂದಿನ ಕುಟುಂಬದಲ್ಲಿ ಮೊಬೈಲ್, ಫೇಸ್ ಬುಕ್, ಇಂಟರ್‌ನೆಟ್ ಇತರೆ ಮಾಧ್ಯಮಗಳಿಂದ ಸಂಸಾರ ಹಾಳಾಗುತ್ತಿದೆ. ಮನುಷ್ಯನಿಗೆ ನೆಮ್ಮದಿ0ಯ ಜೀವನ ಇಲ್ಲದಂತಾಗಿದೆ. ಇದಕ್ಕೆಲ್ಲ ಕಾರಣ ದುರಾಸೆ, ದುರಾಲೋಚನೆ, ಅವೈಜ್ಞಾನಿಕ ಬದುಕು ದುಡಿಮೆ ಇಲ್ಲದ ಜೀವನ, 0ಯುವಕರು ಮಧ್ಯವ್ಯಸನ ದುಶ್ಚಟಗಳ ದಾಸರಾಗಿ ಮಾನಸಿಕ ಸಮತೋಲನ ಕಳೆದುಕೊಂಡು ಕಳ್ಳತನ ದರೋಡೆ ಮೋಸ, ವಂಚನೆ, ಕೊಲೆ ಸುಲಿಗೆ ದೌರ್ಜನ್ಯ ಅತ್ಯಾಚಾರ ಆತ್ಮಹತ್ಯೆ ಮುಂತಾದ ಕೃತ್ಯಗಳಿಗೆ ಇಡಿ ಸಮಾಜ ಹಾಳಾಗುತ್ತಿದೆ. ಇಂತಹವರಿಗೆ ಜಾಗೃತಿ ಅಗತ್ಯ ಮುಂದಿನ ದಿನಗಳಲ್ಲಿ ಎಲ್ಲರಿಗೂ ನವೋಲ್ಲಾಸ ಹುರುಪು ಉತ್ಸಾಹದಿಂದ ಪ್ರಜಾಪ್ರಭುತ್ವದ ತಳಹದಿ0ಯಲ್ಲಿ ನಂಬಿಕೆ ಇಟ್ಟು ಒಂದು ದೇಶ ಹಲವು ಸಮಸ್ಯೆಗಳು ಬಗೆಹರಿಸಲು ಎಲ್ಲರು ಕಾನೂನು, ಶಿಕ್ಷಣ, ಕಾನೂನು ಅರಿವು, ರಕ್ಷಣೆ, ಪುನರ್ವಸತಿ, ನ್ಯಾ0ಯಸಮ್ಮತ ಜೀವನ, ನನ್ನ ಕುಟುಂಬ, ನನ್ನ ಹಳ್ಳಿ, ನನ್ನ ತಾಲ್ಲೂಕು ನನ್ನ ಜಿಲ್ಲೆ ನನ್ನ ರಾಜ್ಯ ನನ್ನ ದೇಶದ ಬಗ್ಗೆ ಗೌರವ ಇಟ್ಟು ಅಸಹಾ0ಯಕ ಅನೇಕ ಸಮಸ್ಯೆಗಳಿಂದ ಕಷ್ಟ ಕಾರ್ಪಣ್ಯಗಳಿಗೆ ಒಳಗಾದ ವಿಕಲಚೇತನರಿಗೆ ಹಿರಿ0ಯನಾಗರೀಕರಿಗೆ ದೌರ್ಜನ್ಯಕ್ಕೊಳಗಾದವರಿಗೆ ಅನಾಥರಿಗೆ ಅವರೊಂದಿಗೆ ನಾವು ಮಾನವೀ0ಯ ಮೌಲ್ಯಗಳಿಂದ ಸಹಕರಿಸಿ ನಮ್ಮೊಂದಿಗೆ ಜೀವಿಸಲು ಸಹಕರಿಸೋಣ.

ಮಾನ್ಯರೆ:– ನಾನು ನನ್ನ ಕುಟುಂಬದ ಸದಸ್ಯರ ಅನೇಕ ಸಮಸ್ಯೆಗಳಿಗೆ ಕಷ್ಟಕಾರ್ಪಣ್ಯಗಳಿಗೆ ನಾವು ಸದಾ ಚಿಂತಿಸುವುದು ಇದು ಕರ್ತವ್ಯ ಆದರೆ, ಅಸಹಾ0ಯಕರಿಗೆ ಕಷ್ಟದಲ್ಲಿರುವವರಿಗೆ ಅನಾರೋಗ್ಯ ಪೀಡಿತರಿಗೆ 0ಯಾರು ಬಲ ಇಲ್ಲದವರಿಗೆ ಮತ್ತು ದುರ್ಬಲರಿಗೆ ಸಹಾ0ಯ ಮಾಡಿದರೆ ಅದು ಸೇವೆ ಎಂದು ಭಾವಿಸುತ್ತೇನೆ.
~~~

# ಆಡಳಿತ ಮಂಡಳಿ

| | |
|---|---|
| ಶ್ರೀಮತಿ ವಿದ್ಯಾವತಿ ಎಸ್.ಪಡಿಗೆರಿ | ಅಧ್ಯಕ್ಷರು |
| ಶ್ರೀ ಮಂಜುನಾಥ ಎಸ್ ನಾಡರ | ಕಾರ್ಯದರ್ಶಿಗಳು |
| ಶ್ರೀ ಶಿವರಾಜ ಎಚ್.ಎಚ್. | ನಿರ್ದೇಶಕರು |
| ಶ್ರೀ ಸಂಪತಕುಮಾರ ಜಿ.ಎಸ್ | ನಿರ್ದೇಶಕರು |
| ಶ್ರೀ ವಿರುಪಾಕ್ಷಿ ಎಸ್.ಕೆ | ನಿರ್ದೇಶಕರು |
| ಶ್ರೀಮತಿ ಮಾಧುರಿ ಎನ್.ಎಂ | ನಿರ್ದೇಶಕರು |
| ಶ್ರೀ ಮಂಜುನಾಥ ಸಿ.ಮುಗದೂರು | ನಿರ್ದೇಶಕರು |
| ಶ್ರೀ ನಿಂಗನಗೌಡ.ಬ.ಬೂದಗಟ್ಟಿ | ನಿರ್ದೇಶಕರು |
| ಶ್ರೀ ಬಸವರಾಜ ಎಚ್.ಎಚ್ | ನಿರ್ದೇಶಕರು |

- **ಕಾರ್ಯಕಾರಿ ಮಂಡಳಿ:** ಕಾರ್ಯಕಾರಿ ಮಂಡಳಿಯು ಸಂಸ್ಥೆಯಡಿಯಲ್ಲಿ ನಡೆಯುತ್ತಿರುವ ಯೋಜನೆಗಳನ್ನು ಕಾಲಕಾಲಕ್ಕೆ ಸಭೆಗಳನ್ನು ನಡೆಸಿ ಪರಿಶೀಲಿಸಿ ಸಮಾಜದ ಬದಲಾವಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.
- **ಕಛೇರಿ:** ಚಿತ್ರದುರ್ಗ ಜಿಲ್ಲೆಯಾದ್ಯಂತ ಪ್ರಸ್ತುತ ಕಛೇರಿ ಹೊಂದಿ ಕಾರ್ಯನಿರ್ವಹಿಸುತ್ತಿದೆ. ಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ.
- ಸಮಾಜದ ಅಹಿತಕರ ಘಟನೆಗಳಿಗೆ ಸಂಕಷ್ಟಕ್ಕೆ ಒಳಗಾದ ಮಹಿಳೆಯರ, ಮಕ್ಕಳ, ಹಿರಿಯನಾಗರೀಕರ, ದುರ್ಬಲವರ್ಗದವರ ಶ್ರೇಯೋಭಿವೃದ್ಧಿಗಾಗಿ ಕ್ರಿಯಾ ಯೋಜನೆ ಹಾಗೂ ವೇಳಾಪಟ್ಟಿ ತಯಾರಿಸಿ 24X7 ಕಾರ್ಯನಿರ್ವಹಿಸುತ್ತಿದೆ.

## ಕಾರ್ಯಮಗಳ ವಿವರ

| ಕ್ರಸಂ | ಕಾರ್ಯಮಗಳ ವಿವರ | ಸಂಖ್ಯೆ |
|---|---|---|
| 1 | ಮಕ್ಕಳ ರಕ್ಷಣಾ ವಿಷಯದ ಕುರಿತು ಜಾಗೃತಿ ಹಾಗೂ ಜಾಥಾ ಕಾರ್ಯಕ್ರಮ. | 10 |
| 2 | ಮಹಿಳೆಯರ ರಕ್ಷಣೆ,ಪುನರ್ವಸತಿ ಹಾಗೂ ಕಾನೂನು ಅರಿವು ಕಾರ್ಯಕ್ರಮ. | 07 |
| 3 | ವಿಕಲಚೇತನರ ವೈದ್ಯಕೀಯ ತಪಾಸಣಾ ಮತ್ತು ಜಾಗೃತಿ ಶಿಬಿರ. | 08 |
| 4 | ಹಿರಿಯ ನಾಗರಿಕರ ರಕ್ಷಣೆ,ಪುನರ್ವಸತಿ ಹಾಗೂ ಕಾನೂನು ಅರಿವು ಕಾರ್ಯಕ್ರಮ | 08 |
| 5 | ವಿವಿಧ ಸ್ವಯಂ ಸೇವಾ ಸಂಸ್ಥೆಗಳಿಗೆ ಕಾರ್ಯಗಾರ. | 05 |
| 6 | ಪಲ್ಸ್ ಪೋಲಿಯೋ ಹಾಗೂ ಜಾಥಾ ಕಾರ್ಯಕ್ರಮ. | 01 |
| 7 | ವಿಕಲಚೇತನರ ಸಮಸ್ಯೆಗಳು ಕುರಿತು ರಾಜ್ಯ ಮಟ್ಟದ ಕಾನ್ಫರೆನ್ಸ್. | 01 |
| 8 | ಪರಿಸರ ಸಂರಕ್ಷಣೆಯ ಜಾಗೃತಿ ಹಾಗೂ ಸಸಿ ನೆಡುವ ಕಾರ್ಯಕ್ರಮ. | 04 |
| 9 | ವ್ಯಕ್ತಿತ್ವ ವಿಕಸನ ಕುರಿತು ಸ್ವಯಂ ಸೇವಾ ಸಂಸ್ಥಯ ಸಿಬ್ಬಂದಿಗಳಿಗೆ ತರಬೇತಿ. | 01 |
| 10 | ಜಲ ಸಂರಕ್ಷಣೆ ಕುರಿತು ಜಾಗೃತಿ ಕಾರ್ಯಕ್ರಮ. | 05 |
| 11 | ಆರೋಗ್ಯ ಮತ್ತು ಸ್ವಚ್ಚತಾ ಕುರಿತು ಜಾಗೃತಿ ಕಾರ್ಯಕ್ರಮ. | 02 |
| 12 | ಮದ್ಯ ಹಾಗೂ ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಕಾರ್ಯಕ್ರಮ. | 01 |
| | ಒಟ್ಟು | 53 |




ದಿನಾಂಕ:25.10.2019 ರಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ವಕೀಲರ ಸಂಘ, ವಿಕಲಚೇತನರ ಹಗೂ ಹಿರಿಯನಾಗರಿಕರ ಸಬಲೀಕರಣ ಇಲಾಖೆ, ರಾಘವೇಂದ್ರ ವಿದ್ಯಾ ಸಂಸ್ಥೆ ಹಾಗೂ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ (ರಿ,)ಚಿತ್ರದುರ್ಗ ಇವರ ಆಶ್ರಯದಲ್ಲಿ ಬಿ.ಇಡಿ ಕಾಲೇಜಿನ ಪ್ರ–ಶಿಕ್ಷಣಾರ್ಥಿಗಳಿಗೆ ಮಾನಸಿಕ ಅಸ್ವಸ್ಥ ಮತ್ತು ವಿಕಲಚೇತನರಿಗೆ ಕಾನೂನು ಸೇವೆಗಳು ವಿಷಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಶ್ರೀಕಾಂತ್ ವೈ. ವಟವಟಿ ಹಾಗೂ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀ ಶಿವಣ್ಣ ರಾಘವೇಂದ್ರ ವಿದ್ಯಾ ಸಂಸ್ಥೆ ಕಾರ್ಯದರ್ಶಿ ಶ್ರೀ ಎಚ್ ಶ್ರೀನಿವಾಸ ವಕೀಲರ ಸಂಘದ ಅಧ್ಯಕ್ಷ ಶ್ರೀ ವಿಜಯಕುಮಾರ ಹಾಗೂ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಮಂಜುನಾಥ ಎಸ್ ನಾಡರ ಕಾರ್ಯಕ್ರಮವನ್ನು ಉದ್ಘಾಟಣೆ ಮಾಡುತ್ತಿರುವುದು.




ಮಾನಸಿಕ ಅಸ್ವಸ್ಥ ಮತ್ತು ವಿಕಲಚೇತನರಿಗೆ ಕಾನೂನು ಸೇವೆಗಳು ವಿಷಯ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರ–ಶಿಕ್ಷಣಾರ್ಥಿಗಳು






ದಿನಾಂಕ:05.10.2019 ರಂದು ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಮಟ್ಟದ ಪಾಲುದಾರರ ಸಮಾವೇಶದ ನಗರಗಳಲ್ಲಿನ ಬಡತನ ಮತ್ತು ಹವಾಮಾನ ಬದಲಾವಣೆಯಿಂದ ಬಡ ಜನರ ಮೇಲೆ ಆಗುವ ಪರಿಣಾಮಗಳ ಕುರಿತಾದ ಕಾರ್ಯಕ್ರಮದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ ವತಿಯಿಂದ ಭಾಗವಹಿಸಿರುವುದು.



ದಿನಾಂಕ:10.10.2019 ರಂದು ಹೊಳಲ್ಕೆರೆ ತಾ॥ ಹಿರೇ ಎಮ್ಮಿಗನೂರು ಗ್ರಾಮ ಪಂಚಾಯಿತಿಯಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ (ರಿ,) ಚಿತ್ರದುರ್ಗ, ಗ್ರಾಮ ಪಂಚಾಯಿತಿ ಹಿರೇ ಎಮ್ಮಿಗನೂರು ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಚಿತ್ರದುರ್ಗ ಇವರ ಸಹಯೊಗದಲ್ಲಿ ವಿಕಲಚೇತನರಿಗೆ ಹಾಗೂ ಹಿರಿಯ ನಾಗರಿಕರಿಗೆ ಹಾಗೂ ಸಾರ್ವಜನಿಕರಿಗೆ ಜಾಗೃತಿ ಕಾರ್ಯಕ್ರಮ ಮಾಡಲಾಯಿತು ಕಾರ್ಯಕ್ರಮದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಮಂಜುನಾಥ ಎಸ್ ನಾಡರ ವಿಕಲಚೇತನರು ಹಾಗು ಹಿರಿಯ ನಾಗರಿಕರ ಕುರಿತು ಮಾತನಾಡುತ್ತಿರುವುದು ಕಾರ್ಯಕ್ರಮದಲ್ಲಿ ವಿಶೇಷ ಶಿಕ್ಷಕರಾದ ಶ್ರೀ ಸಿದ್ದಪ್ಪ ಕೆ,ಚೆನ್ನಯ್ ಹೆಗಡೆ, ವಿರುಪಾಕ್ಷಪ್ಪ ಎಸ್ ಹಾಗೂ ವಿಆರ್ ಡಬ್ಲೂ ವೆಂಕಟೇಶ್ ಹಾಜರಿದ್ದರು.



ದಿನಾಂಕ:11.10.2019 ರಂದು ಹೊಸದುರ್ಗ ನಗರದ ಯಲ್ಲಮ್ಮನ ಬಡಾವಣೆಯಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ (ರಿ,) ಚಿತ್ರದುರ್ಗ, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಹೊಸದುರ್ಗ ಇವರ ಸಹಯೊದಲ್ಲಿ ಮಹಿಳೆಯರಿಗೆ ಜಾಗೃತಿ ಕಾರ್ಯಕ್ರಮ ಮಾಡಲಾಯಿತು ಕಾರ್ಯಕ್ರಮದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಮಂಜುನಾಥ ಎಸ್ ನಾಡರ ಮಕ್ಕಳ ಸಹಾಯವಾಣಿ ಕೇಂದ್ರದ ಸಂಯೋಜಕರಾದ ಕುಮಾರಿ. ಲಕ್ಷ್ಮಿಬಾಯಿ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ –2005 ರ ಕುರಿತು ಮಾತನಾಡಿದರು. ಕರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆ, ಮಹಿಳೆಯರು ಸಿಬ್ಬಂದಿಗಳು ಹಾಜರಿದ್ದರು.




ದಿನಾಂಕ:18.10.2019 ರಂದು ಹೊಳಲ್ಕೆರೆ ತಾ॥ ಕಡೂರು ಗ್ರಾಮದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ (ರಿ,) ಚಿತ್ರದುರ್ಗ, ಗ್ರಾಮ ಪಂಚಾಯಿತಿ ಹಿರೇಎಮ್ಮಿಗನೂರು ಇವರ ಸಹಯೊಗದಲ್ಲಿ ಹಿರಿಯ ನಾಗರಿಕರಿಗೆ, ವಿಕಲಚೇತನರಿಗೆ ಹಾಗೂ ಸಾರ್ವಜನಿಕರಿಗೆ ಜಾಗೃತಿ ಕಾರ್ಯಕ್ರಮ ಮಾಡಲಾಯಿತು ಕಾರ್ಯಕ್ರಮದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಮಂಜುನಾಥ ಎಸ್ ನಾಡರ ವಿಕಲಚೇತನರು ಹಾಗೂ ಹಿರಿಯ ನಾಗರಿಕರ ಕುರಿತು ಮಾತನಾಡುತ್ತಿರುವುದು ಕಾರ್ಯಕ್ರಮದಲ್ಲಿ ವಿಶೇಷ ಶಿಕ್ಷಕರಾದ ಶ್ರೀ ಸಿದ್ದಪ್ಪ ಕೆ,ಚಿನ್ಮಯ್ ಹೆಗಡೆ, ಹನುಮಂತಪ್ಪ ಹಾಗೂ ವಿಆರ್‌ಡಬ್ಲೂ ವೆಂಕಟೇಶ್ ಹಾಜರಿದ್ದರು.



ದಿನಾಂಕ:23.10.2019 ರಂದು ಚಿತ್ರದುರ್ಗ ನಗರದ ಲೋಕಾಯುಕ್ತ ಪೊಲೀಸ್ ಆವರಣದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ (ರಿ,) ಚಿತ್ರದುರ್ಗ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ದಿ ಸಂಸ್ಥೆ ಚಿತ್ರದುರ್ಗ ಇವರ ಸಹಯೊದಲ್ಲಿ ಮಹಿಳೆಯರಿಗೆ ಜಾಗೃತಿ ಕಾರ್ಯಕ್ರಮ ಮಾಡಲಾಯಿತು ಕಾರ್ಯಕ್ರಮದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಮಂಜುನಾಥ ಎಸ್ ನಾಡರ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ –2005 ರ ಕುರಿತು ಮಾತನಾಡುತ್ತಿರುವುದು ಕಾರ್ಯಕ್ರಮದಲ್ಲಿ ವಿಶೇಷ ಶಿಕ್ಷಕರಾದ ಶ್ರೀ ಸಿದ್ದಪ್ಪ ಕೆ, ಜೆ.ವಿ.ಕೆ –ಸಂಯೊಜಕರಾದ ಶ್ರೀಮತಿ ಮಮತ ಹಾಜರಿದ್ದರು.




ದಿನಾಂಕ:04.11.2019 ರಂದು ಹೊಳಲ್ಕೆರೆ ತಾ॥ ಅಂತಾಪೂರ ಗ್ರಾಮದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ (ರಿ,) ಚಿತ್ರದುರ್ಗ, ಗ್ರಾಮ ಪಂಚಾಯಿತಿ ಹಿರೇ ಎಮ್ಮಿಗನೂರು ಇವರ ಸಹಯೊದಲ್ಲಿ ವಿಕಲಚೇತನರಿಗೆ ಹಾಗೂ ಹಿರಿಯ ನಾಗರಿಕರಿಗೆ ಹಾಗೂ ಸಾರ್ವಜನಿಕರಿಗೆ ಜಾಗೃತಿ ಕಾರ್ಯಕ್ರಮ ಮಾಡಲಾಯಿತು ಕಾರ್ಯಕ್ರಮದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಮಂಜುನಾಥ ಎಸ್ ನಾಡರ ವಿಕಲಚೇತನರು ಹಾಗೂ ಹಿರಿಯ ನಾಗರಿಕರ ಕುರಿತು ಮಾತನಾಡುತ್ತಿರುವುದು ಕಾರ್ಯಕ್ರಮದಲ್ಲಿ ವಿಶೇಷ ಶಿಕ್ಷಕರಾದ ಶ್ರೀ ಸಿದ್ದಪ್ಪ ಕೆ,ಚಿನ್ಮಯ್ ಹೆಗಡೆ, ಮುಖ್ಯ ಶಿಕ್ಷಕರಾದ ಶ್ರೀ ಬಾಬು ಬಿ.ಎಚ್ ಹಾಗೂ ವೆಂಕಟೇಶ್ ಹಾಜರಿದ್ದರು.




ದಿನಾಂಕ:13.11.2019 ರಂದು ಹೊಳಲ್ಕೆರೆ ತಾ॥ ನಂದಿಹಳ್ಳಿ ಗ್ರಾಮದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ (ರಿ,) ಚಿತ್ರದುರ್ಗ, ಗ್ರಾಮ ಪಂಚಾಯಿತಿ ಹಿರೇ ಎಮ್ಮಿಗನೂರು ಇವರ ಸಹಯೊದಲ್ಲಿ ಹಿರಿಯ ನಾಗರಿಕರಿಗೆ, ವಿಕಲಚೇತನರಿಗೆ ಹಾಗೂ ಸಾರ್ವಜನಿಕರಿಗೆ ಜಾಗೃತಿ ಕಾರ್ಯಕ್ರಮ ಮಾಡಲಾಯಿತು, ಕಾರ್ಯಕ್ರಮದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಮಂಜುನಾಥ ಎಸ್ ನಾಡರ ವಿಕಲಚೇತನರು ಹಾಗೂ ಹಿರಿಯ ನಾಗರಿಕರ ಕುರಿತು ಮಾತನಾಡುತ್ತಿರುವುದು ಕಾರ್ಯಕ್ರಮದಲ್ಲಿ ವಿಶೇಷ ಶಿಕ್ಷಕರಾದ ಶ್ರೀ ಸಿದ್ದಪ್ಪ ಕೆ, ಶ್ರೀ ಚಿನ್ಮಯ್ ಹೆಗಡೆ, ಶ್ರೀ ವಿರುಪಾಕ್ಷಪ್ಪ ಎಸ್ ಹಾಗೂ ವೆಂಕಟೇಶ್ ಹಾಜರಿದ್ದರು.







ದಿನಾಂಕ:14.11.2019 ರಂದು ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರ, ವಕೀಲರ ಸಂಘ, ಮಕ್ಕಳ ಸಹಾಯವಾಣಿ ಕೇಂದ್ರ ಹಾಗೂ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ (ರಿ,)ಚಿತ್ರದುರ್ಗ ಇವರ ಆಶ್ರಯದಲ್ಲಿ ಮಕ್ಕಳ ದಿನಾಚರಣೆ ಕಾರ್ಯಕ್ರಮವನ್ನು ಹೊಸದುರ್ಗ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ನಿವೃತ್ತ ಉಚ್ಚ ನ್ಯಾಯಲಯದ ನ್ಯಾಯಾಧಿಶರಾದ ಶ್ರೀ ಬಿಲ್ಲಪ್ಪ, ಗೌ||ಅಧ್ಯಕ್ಷರು ಕಾನೂನು ಸಮಿತಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧಿಶರಾದ ಶ್ರೀ ದಿನೇಶ್ ಬಿ.ಜಿ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಜಯಪ್ಪ. ಎಲ್, ತಹಶಿಲ್ದಾರ್ ಶ್ರೀ ತಿಪ್ಪೇಸ್ವಾಮಿ, ಸಬ್ ಇನ್ಸಪೆಕ್ಟರ್ ಶ್ರೀ ಶಿವಕುಮಾರ್, ಶ್ರೀ ನಾಗೇಂದ್ರಪ್ಪ ಪ್ರಾಶುಂಪಾಲರು, ಮಕ್ಕಳ ಸಹಾಯವಾಣಿ ಕೇಂದ್ರದ ಸಂಯೋಜಕರಾದ ಕು|| ಲಕ್ಷ್ಮೀಬಾಯಿ, ಶಿಶು ಅಭಿವೃದ್ದಿ ಯೋಜನಾಧಿಕಾರಿಗಳಾದ ಶ್ರೀಮತಿ ಶ್ರಿದೇವಿ ಹಾಗೂ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಮಂಜುನಾಥ ಎಸ್ ನಾಡರ ಕಾರ್ಯಕ್ರಮದಲ್ಲಿ ಹಾಜರಿದ್ದರು ಗಣ್ಯರು ಮಕ್ಕಳಹಕ್ಕುಗಳು, ಬಾಲ್ಯ ವಿವಾಹ ನಿಷೇಧ ಕಾಯ್ದೆ,ಮಕ್ಕಳ ಮಾರಾಟ ಮತ್ತು ಸಾಗಾಟ ತಡೆ ಕಾಯ್ದೆ ಮಕ್ಕಳ ಕಲ್ಯಾಣ ಸಮಿತಿ ಮಕ್ಕಳ ಸಹಾಯವಾಣಿ ಕೇಂದ್ರ,ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮುಂತಾದ ಮಕ್ಕಳ ರಕ್ಷಣಾ ಕಾಯ್ದೆಗಳ ಬಗ್ಗೆ ತಿಳಿಸಲಾಯಿತು ಕಾರ್ಯಕ್ರಮದಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ–2012 ಹಾಗೂ ಬಾಲ್ಯ ವಿವಾಹ ನಿಷೇಧ ಕಾಯ್ದೆಯ ಮೋಸ್ಟರ್‌ಗಳನ್ನು ಬಿಡುಗಡೆ ಮಾಡಲಾಯಿತು ಕಾರ್ಯಕ್ರಮದಲ್ಲಿ ಮಕ್ಕಳು ಕಾಲೇಜಿನ ಸಿಬ್ಬಂದಿಗಳು, ಸಂಸ್ಥೆಯ ಸಿಬ್ಬಂದಿಗಳು ಹಾಜರಿದ್ದರು.






ದಿನಾಂಕ:21.12.2019 ರಂದು ಚಿತ್ರದುರ್ಗ ನಗರದ ಲೋಕಾಯುಕ್ತ ಪೋಲೀಸ್ ಆವರಣದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ (ರಿ,) ಚಿತ್ರದುರ್ಗ, ಫ್ರೀಡಂ ಟ್ರಸ್ಟ್ ಚೆನ್ನೈ ಹಾಗೂ ಡಿಡಿಆರ್‌ಸಿ ಚಿತ್ರದುರ್ಗ ಇವರ ಸಹಯೋಗದಲ್ಲಿ 50 ದೈಹಿಕ ವಿಕಲಚೇತನರಿಗೆ ಕೃತಕ ಕಾಲು ಜೋಡಣಾ ತಪಾಸಣಾ ಶಿಬಿರ ಮಾಡಲಾಯಿತು. ಕಾರ್ಯಕ್ರಮದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಮಂಜುನಾಥ ಎಸ್ ನಾಡರ,ಆಕಾಶ ಬಿಎಸ್.ಚಿನ್ಮಯ್ ಹೆಗಡೆ,ರಿಷಿ ಕುಮಾರ್,ಸಿಮೋನ್ ರಾಜು ರಾಯಮೊನ್ ಹಾಗೂ ಅಧ್ಯಕ್ಷರಾದ ಶ್ರೀಮತಿ ವಿದ್ಯಾವತಿ.ಎಸ್.ಪಿ ಮತ್ತಿತರರು ಉಪಸ್ಥಿತರಿದ್ದರು.



ದಿನಾಂಕ:03.01.2019 ರಂದು ಚಿತ್ರದುರ್ಗ ನಗರದ ಲೋಕಾಯುಕ್ತ ಪೊಲೀಸ್ ಆವರಣದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ (ರಿ,) ಚಿತ್ರದುರ್ಗ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ದಿ ಸಂಸ್ಥೆ ಚಿತ್ರದುರ್ಗ ಇವರ ಸಹಯೊದಲ್ಲಿ ಮಹಿಳೆಯರಿಗೆ ಜಾಗೃತಿ ಕಾರ್ಯಕ್ರಮ ಮಾಡಲಾಯಿತು ಕಾರ್ಯಕ್ರಮದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಮಂಜುನಾಥ ಎಸ್ ನಾಡರ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ –2005 ರ ಕುರಿತು ಮಾತನಾಡುತ್ತಿರುವುದು ಕಾರ್ಯಕ್ರಮದಲ್ಲಿ ಶ್ರೀ ಮಲ್ಲೇಶಪ್ಪ ಸಿ.ಎಂ, ಹಾಗೂ ಜೆ.ವಿ.ಕೆ ಸಂಯೋಜಕರಾದ ಕು||ವಿದ್ಯಾ ಹಾಜರಿದ್ದರು.




ದಿನಾಂಕ:19.01.2020 ರಂದು ಚಿತ್ರದುರ್ಗ ನಗರದ ಜೆ.ಜೆ.ಹಟ್ಟಿಯಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ (ರಿ,)ಚಿತ್ರದುರ್ಗ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಚಿತ್ರದುರ್ಗ ಇವರ ಸಹಯೊಗದಲ್ಲಿ ಪಲ್ಸ್ ಪೋಲಿಯೊ ಕಾರ್ಯಕ್ರಮ ಮತ್ತು ಜಾಥಾ ಕಾರ್ಯಕ್ರಮ ಮಾಡಲಾಯಿತು. ಕಾರ್ಯಕ್ರಮದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಮಂಜುನಾಥ ಎಸ್ ನಾಡರ ಮಗುವಿಗೆ ಪಲ್ಸ್ ಪೋಲಿಯೊ ಹಾಕುತ್ತಿರುವುದು.




ದಿನಾಂಕ:20.01.2020 ರಂದು ಮಕ್ಕಳ ಸಹಾಯವಾಣಿ ಕೇಂದ್ರ ಹಾಗೂ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ (ರಿ,)ಚಿತ್ರದುರ್ಗ ಇವರ ಆಶ್ರಯದಲ್ಲಿ ಮಕ್ಕಳ ರಕ್ಷಣೆಯ ಬಗ್ಗೆ ಚಿತ್ರದುರ್ಗ ತಾ॥ ಸಿದ್ದಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾಡಲಾಯಿತು ಕಾಯಕ್ರಮದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಮಂಜುನಾಥ ಎಸ್ ನಾಡರ ಮಕ್ಕಳ ರಕ್ಷಣೆಯ ಕುರಿತು ಮಾತನಾಡಿದರು.



26.01.2020 ರಂದು ಲೋಕಾಯುಕ್ತ ಪೊಲೀಸ್ ಕಛೇರಿ ಆವರಣದಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು ಕಾರ್ಯಕ್ರಮದಲ್ಲಿ ಶ್ರೀ.ಜಿ.ಮಂಜುನಾಥ ಮಾನ್ಯ ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಚಿತ್ರದುರ್ಗ ಮತ್ತು ಸಿಬ್ಬಂದಿಗಳು ಹಾಗೂ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಮಂಜುನಾಥ ಎಸ್ ನಾಡರ ಭಾಗವಹಿಸಿರುವುದು.




01.02.2020 ಹಾಗೂ 02.02.2020 ರಂದು ಕೆ.ಪಿ.ಎ.ಎಂ.ಆರ್.ಸಿ ಬೆಂಗಳೂರು ಇವರ ವತಿಯಿಂದ ಆಯೋಜಿಸಿದ್ದ ವಿಕಲಚೇತನರ ಸಮಸ್ಯೆಗಳು ಎಂಬ ವಿಷಯದ ಕುರಿತಾದ ಎರಡು ದಿನಗಳ ರಾಜ್ಯ ಮಟ್ಟದ ಕಾನ್ಪರೆನ್ಸನಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ ವತಿಯಿಂದ ಭಾಗವಹಿಸಿರುವುದು.




ದಿನಾಂಕ:17.02.2020 ರಂದು ಮಕ್ಕಳ ಸಹಾಯವಾಣಿ ಕೇಂದ್ರ ಹಾಗೂ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ (ರಿ,)ಚಿತ್ರದುರ್ಗ ಇವರ ಆಶ್ರಯದಲ್ಲಿ ಮಕ್ಕಳ ರಕ್ಷಣೆಯ ಬಗ್ಗೆ ಚಳ್ಳಕೆರೆ ತಾ॥ ಕಾಪರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಾಗೃತಿ ಕಾರ್ಯಕ್ರಮ ಮಾಡಲಾಯಿತು ಕಾಯಕ್ರಮದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಮಂಜುನಾಥ ಎಸ್ ನಾಡರ ಮತ್ತು ಮಕ್ಕಳ ಸಹಾಯವಾಣಿ ಕೇಂದ್ರದ ಸಂಯೋಜಕರರಾದ ಕು॥ಲಕ್ಷ್ಮೀಬಾಯಿರವರು ಮಕ್ಕಳ ರಕ್ಷಣೆಯ ಕುರಿತು ಮಾತನಾಡಿದರು.



ದಿನಾಂಕ:24.02.2020 ರಂದು ಮಕ್ಕಳ ಸಹಾಯವಾಣಿ ಕೇಂದ್ರ ಹಾಗೂ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ (ರಿ,)ಚಿತ್ರದುರ್ಗ ಇವರ ಆಶ್ರಯದಲ್ಲಿ ಮಕ್ಕಳ ರಕ್ಷಣೆಯ ಬಗ್ಗೆ ಚಳ್ಳಕೆರೆ ನಗರದ ಎಚ್.ಟಿ.ಟಿ ಬಾಲಕಿಯರ ಸರ್ಕಾರಿ ಪ್ರೌಢ ಶಾಲೆಯಲ್ಲಿ ಜಾಗೃತಿ ಕಾರ್ಯಕ್ರಮ ಮಾಡಲಾಯಿತು ಕಾಯಕ್ರಮದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಮಂಜುನಾಥ ಎಸ್ ನಾಡರ ಮಕ್ಕಳ ರಕ್ಷಣೆಯ ಕುರಿತು ಮಾತನಾಡಿದರು.



ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯ ಕಾರ್ಯದರ್ಶಿ ಮಂಜುನಾಥ ಎಸ್ ನಾಡರ ಹಾಗೂ ಜಿಲ್ಲಾ ಹೊಂಬೆಳಕು ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರದ ಸಮಾಜ ಕಾರ್ಯಕರ್ತ ಹನುಮಂತಪ್ಪ ರವರು ಹಿರಿಯನಾಗರಿಕನನ್ನು ರಕ್ಷಿಸಿ ಸಹಾಯವಾಣಿ ಕೇಂದ್ರಕ್ಕೆ ದಾಖಲಿಸಲಾಯಿತು.






ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಶಾಖೆಯ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಹಾಗೂ ರೋಟರಿ ಕ್ಲಬಿನ ಪದಾಧಿಕಾರಿಗಳು ಹಾಗೂ ಗೌರ್ನರ್ ರವರು ಜಿಲ್ಲೆಯ 90 ದೈಹಿಕ ವಿಕಲಚೇತನರಿಗೆ ಉಚಿತವಾಗಿ ಗಾಲಿ ಕುರ್ಚಿ ಹಾಗೂ 50 ಜನ ಬುದ್ದಿ ಮಾಂದ್ಯ ಮಕ್ಕಳಿಗೆ ಉಚಿತ ಎಂ.ಆರ್.ಕಿಟ್‌ಗಳ ವಿತರಣಾ ಕಾರ್ಯಕ್ರಮದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸಭಾಪತಿಗಳಾದ ಶ್ರೀ ಎಚ್.ಎಸ್.ಸುಂದರರಾಜ್ ಹಾಗೂ ನಿರ್ದೇಶಕರು ಕಾರ್ಯದರ್ಶಿ ಮಂಜುನಾಥ ಎಸ್ ನಾಡರ ಅವರಿಗೆ ಗೌರವಿಸಿ ಅಭಿನಂದಿಸುತ್ತಿರುವುದು



ದಿನಾಂಕ:06.03.2020 ರಂದು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಶಾಖೆಯ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಹಾಗೂ ರೋಟರಿ ಕ್ಲಬ್ ರೋಟರಿ ಸದಾಶಿವನಗರ ಬೆಂಗಳೂರು, ವಿಕಲಚೇತನರ ಹಾಗೂ ಹಿರಿಯನಾಗರಿಕರ ಸಬಲೀಕರಣ ಇಲಾಖೆ, ಡಿಡಿಆರ್‌ಸಿ ಚಿತ್ರದುರ್ಗ ಹಾಗೂ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ (ರಿ,) ಚಿತ್ರದುರ್ಗ ಸಹಯೋಗದಲ್ಲಿ ಜಿಲ್ಲೆಯ 90 ದೈಹಿಕ ವಿಕಲಚೇತನರಿಗೆ ಉಚಿತವಾಗಿ ಗಾಲಿ ಕುರ್ಚಿಗಳನ್ನು ವಿತರಣೆ ಮಾಡಿರುವುದು.





ಚಿತ್ರದುರ್ಗ ಜಿ॥ ಹೊಳಲ್ಕೆರೆ ತಾ॥ ದಾಸರಹಳ್ಳಿಯಲ್ಲಿ ಹಾಗೂ ಹೊಸದುರ್ಗ ಮಾರುತಿ ನಗರದಲ್ಲಿ ತಾ॥ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯ ಕಾರ್ಯದರ್ಶಿ ಮಂಜುನಾಥ ಎಸ್ ನಾಡರ ರವರು ಹಿರಿಯನಗರಿಕರಾದ ಶ್ರೀಮತಿ ಗಂಗಮ್ಮ ರವರಿಗೆ ಹಿರಿಯನಾಗರಿಕರ ಸೌಲಭ್ಯಗಳ ಕುರಿತು ಮಾಹಿತಿ ನೀಡುತ್ತಿರುವುದು ಹಾಗೂ ಅಜ್ಜಿ ಗಂಗಮ್ಮ ರವರು ತನ್ನ ಸಮಸ್ಯೆಯನ್ನು ಹೇಳಿಕೊಳ್ಳುತ್ತಿರುವುದು.





ಚಿತ್ರದುರ್ಗ ಜಿ॥ ಹೊಳಲ್ಕೆರೆ ತಾ॥ ದಾಸರಹಳ್ಳಿಯಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯ ಕಾರ್ಯದರ್ಶಿ ಮಂಜುನಾಥ ಎಸ್ ನಾಡರ ರವರು ಹಿರಿಯನಗರಿಕರಾದ ಶ್ರೀಮತಿ ಗಂಗಮ್ಮ ರವರಿಗೆ ಹಿರಿಯನಾಗರಿಕರ ಸೌಲಭ್ಯಗಳ ಕುರಿತು ಮಾಹಿತಿ ನೀಡುತ್ತಿರುವುದು ಹಾಗೂ ಅಜ್ಜಿ ಗಂಗಮ್ಮ ರವರು ತನ್ನ ಸಮಸ್ಯೆಯನ್ನು ಹೇಳಿಕೊಳ್ಳುತ್ತಿರುವುದು.






ದಿನಾಂಕ:16.03.2020 ರಂದು ಚಿತ್ರದುರ್ಗ ನಗರದ ಲೋಕಾಯುಕ್ತ ಪೊಲೀಸ್ ಕಛೇರಿ ಆವರಣದಲ್ಲಿ ಸರ್ಕಾರಿ ಕಲಾ ಕಾಲೇಜು ಚಿತ್ರದುರ್ಗದ ಅಪರಾಧ ಶಾಸ್ತ್ರ ಮತ್ತು ನ್ಯಾಯವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಮದ್ಯ ಹಾಗೂ ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮಗಳು ಕುರಿತು ಜಾಗೃತಿ ಕಾರ್ಯಕ್ರಮ ಮಾಡಲಾಯಿತು.ಕಾರ್ಯಕ್ರಮದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ ಕಾರ್ಯದರ್ಶಿ ಶ್ರೀ ಮಂಜುನಾಥ ಎಸ್ ನಾಡರ ಹಾಗೂ ಸಿ ಚಿತ್ತಯ್ಯ ಸಹಾಯಕ ಪ್ರಾಧ್ಯಾಪಕರು, ಅಪರಾಧ ಶಾಸ್ತ್ರ ಮತ್ತು ನ್ಯಾಯವಿಜ್ಞಾನ ವಿಭಾಗ, ಸರ್ಕಾರಿ ಕಲಾ ಕಾಲೇಜು ಚಿತ್ರದುರ್ಗ ಹಾಗೂ ವಿರುಪಾಕ್ಷಪ್ಪ ಎಸ್ ಕು॥ಸ್ವಪ್ನ ಹಾಜರಿದ್ದರು.

ವಿಜಯವಾಣಿ
ನಂ.1 ಕನ್ನಡ ದಿನಪತ್ರಿಕೆ
20 ಅಕ್ಟೋಬರ್ 2019 | ಭಾನುವಾರ
20 OCTOBER 2019
ಪುಟ 16+4
ಕನ್ನಡಿಗರ ಧ್ವನಿ
ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI ● CHITRADURGA ● ಚಿತ್ರದುರ್ಗ ಸಹಾಯವಾಣಿ: 8884411687 ● ಸಂಪುಟ 8 ● ಸಂಚಿಕೆ 132 ₹4

## ಸರ್ಕಾರಿ ಸೌಲಭ್ಯಗಳ ಸದುಪಯೋಗ ಪಡೆಯಿರಿ

■ ವಿಜಯವಾಣಿ ಸುದ್ದಿಜಾಲ ಹೊಳಲ್ಕೆರೆ

ಅಂಗವಿಕಲರು ಗ್ರಾಮ ಪಂಚಾಯಿತಿಯಲ್ಲಿ ತಮಗಾಗಿ ಮೀಸಲಿರುವ ಶೇ.5ರಷ್ಟು ಅನುದಾನ ಪಡೆದು ಸ್ವಾವಲಂಬಿ ಜೀವನ ನಡೆಸಬೇಕು ಎಂದು ನೋಡಲ್ ಅಧಿಕಾರಿ ಮಂಜುನಾಥ್ ನಡಾರ್ ತಿಳಿಸಿದರು.

ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ ಚಿತ್ರದುರ್ಗ, ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರದ ಸಂಯುಕ್ತಾಶ್ರಯದಲ್ಲಿ ತಾಲೂಕಿನ ಕಡೂರಿನಲ್ಲಿ ಶನಿವಾರ ಅಂಗವಿಕಲರು ಮತ್ತು ಅವರ ಪಾಲಕರಿಗೆ ಏರ್ಪಡಿಸಿದ್ದ ವೈದ್ಯಕೀಯ ತಪಾಸಣೆ ಶಿಬಿರ, ಆರೋಗ್ಯ ಜಾಗೃತಿ ಕಾರ್ಯಕ್ರಮ ಕುರಿತು ಮಾತನಾಡಿದರು.

ವಿಕಲಚೇತನ ಕಲ್ಯಾಣ ಇಲಾಖೆ ರಿಯಾಯಿತಿ ದರದಲ್ಲಿ ಹಲವಾರು ಸೌಲಭ್ಯ ನೀಡುತ್ತಿದೆ. ಅಲ್ಲದೆ ಕಳೆದ 4 ತಿಂಗಳಿಂದ ಅಂಗವಿಕಲರಿಗೆ ವಿಶಿಷ್ಟ ಗುರುತಿನ ಚೀಟಿ ನೀಡಲಾಗುತ್ತಿದೆ ಎಂದು ತಿಳಿಸಿದರು. ಅಂಗವಿಕಲ ಶಿಕ್ಷಕ ಸಿದ್ದಪ್ಪ, ಡಿಡಿಆರ್‌ಸಿ ಸಿಬ್ಬಂದಿ, ಅಧಿರಕ್ಷಣಾ ಸಮಾಜ ಸಂಸ್ಥೆಯ ಅಧ್ಯಕ್ಷೆ ಎಸ್.ಪಿ. ವಿದ್ಯಾವತಿ, ಸಿಬ್ಬಂದಿ ಇದ್ದರು.


ಕಡೂರು ಗ್ರಾಮದಲ್ಲಿ ಏರ್ಪಡಿಸಿದ್ದ ವೈದ್ಯಕೀಯ ತಪಾಸಣೆ ಶಿಬಿರ ಮತ್ತು ಆರೋಗ್ಯ ಜಾಗೃತಿ ಕಾರ್ಯಕ್ರಮದಲ್ಲಿ ನೋಡಲ್ ಅಧಿಕಾರಿ ಮಂಜುನಾಥ್ ನಡಾರ್ ಮಾತನಾಡಿದರು. ಶಿಕ್ಷಕ ಸಿದ್ದಪ್ಪ, ಗ್ರಾಮಸ್ಥರಾದ ಹನುಮಂತಪ್ಪ, ಚಿನ್ಮಯ ಹಾಗೂ ಇತರರು ಇದ್ದರು.

**ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾ॥ ಕಡೂರಿನಲ್ಲಿ ವಿಕಲಚೇತನರು, ಹಿರಿಯನಾಗರಿಕರು ಹಾಗೂ ಪೋಷಕರಿಗೆ ವೈದ್ಯಕೀಯ ತಪಾಸಣಾ ಹಾಗೂ ಜಾಗೃತಿ ಕಾರ್ಯಕ್ರಮದ ಪತ್ರಿಕೆಯಲ್ಲಿ ಪ್ರಕಟವಾದ ವರದಿ.**

ಜಿ.ಓ.ಎನ್.ಮೂರ್ತಿ ಸಾರಥ್ಯದಲ್ಲಿ.....
ರಾಜ್ಯಂತ ಹೆಚ್ಚು ಪ್ರಸಾರವುಳ್ಳ ಕನ್ನಡ ದಿನಪತ್ರಿಕೆ
ಮುಂಜಾನೆಮಾತು
MUNJANE MATHU
Email : munjanemaathu123@gmail.com
ಕನ್ನಡ ದಿನ ಪತ್ರಿಕೆ.....
A/SK CTA797 01/01/2018-20 Delhi R.N.I 2014/60152 ಮಂಗಳವಾರ : 21-01-2020 ಮಂಗಳವಾರ ಸಂಪುಟ: 6 ಸಂಚಿಕೆ : 19 mo : 9900471967

## ಪಲ್ಸ್ ಪೋಲಿಯೋ ಕಾರ್ಯಕ್ರಮ

ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ(ರಿ,) ಚಿತ್ರದುರ್ಗ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಚಿತ್ರದುರ್ಗ ಇವರ ಸಹಯೋಗದಲ್ಲಿ ದಿನಾಂಕ:19.01.2020 ರಂದು ಚಿತ್ರದುರ್ಗ ನಗರದ ಜೆ.ಜೆ ಹಟ್ಟಿಯಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮ ಮತ್ತು ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು, ಕಾರ್ಯಕ್ರಮದಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆಯ ಕಾರ್ಯದರ್ಶಿ ಮಂಜುನಾಥ ಎಸ್ ಎನ್ ಮಾತನಾಡಿ ಪೋಲಿಯೋ ಮರುಕಳಿಸಲು ಅವಕಾಶ ಮಾಡಿಕೊಡಬೇಡಿ ನಿಮ್ಮ ಮಗುವಿಗೆ ತಪ್ಪದೆ ಲಸಿಕೆ ಹಾಕಿಸಿ ಆಗ ಮಾತ್ರ ನಿಮ್ಮ ಮಗು ಪೋಲಿಯೋದಿಂದ ಸಂಪೂರ್ಣ ಸುರಕ್ಷಿತವಾಗಿರುತ್ತದೆ. ಕಡ್ಡಾಯವಾಗಿ ಎಲ್ಲ ಮಕ್ಕಳಿಗೂ ಪಲ್ಸ್ ಪೋಲಿಯೋವನ್ನು ಹಾಕಿಸುವುದರ ಮೂಲಕ ವಿಕಲಚೇತನವನ್ನು ತಡೆಯಬೇಕು ಪೋಲಿಯೋ ಮುಕ್ತ ದೇಶವನ್ನು ಮಾಡಬೇಕು ಎಂದು ತಿಳಿಸಿದರು,ರುದ್ರಮುನಿ ಹೆಲ್ತ್ ಇನ್ಸಪೆಕ್ಟರ್ ಶ್ರೀ ರುದ್ರಮುನಿ ಮಾತನಾಡಿ ಜೆ.ಜೆ.ಹಟ್ಟಿ ವಾರ್ಡಿನ ಎಲ್ಲಾ ಕಟುಂಬದ ಸದಸ್ಯರು ಮಕ್ಕಳ ಆರೋಗ್ಯದ ದೃಷ್ಟಿಯಿಂದ ಎಲ್ಲರಿಗೂ ಮಾಹಿತಿ ನೀಡಿ ಮಕ್ಕಳನ್ನು ಅಂಗನವಾಡಿ ಕೇಂದ್ರಕ್ಕೆ ಕಳುಹಿಸಿ ಈ ಕಾರ್ಯಕ್ರಮಕ್ಕೆ ಸಹಕಾರ ನೀಡಬೇಕು ಎಂದು ತಿಳಿಸಿದರು.ಇದೇ ಸಂದರ್ಭದಲ್ಲಿ ನಗರದಲ್ಲಿ ಜಾಥ ಮಾಡುವುದರ ಮೂಲಕ ಜಾಗೃತಿಯನ್ನು ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಸಮಾಜ ಕಾರ್ಯಕರ್ತ ಶ್ರೀ.ಹನುಮಂತಪ್ಪ, ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ಭಾರತಿ, ಶ್ರೀಮತಿ. ಮಿಸ್ಬಾ ಫಾತೀಮಾ ಆಶಾ ಕಾರ್ಯಕರ್ತೆ ಹಾಜರಿದ್ದರು



**ದಿನಾಂಕ:19.01.2020 ರಂದು ಚಿತ್ರದುರ್ಗ ನಗರದ ಜೆ.ಜೆ.ಹಟ್ಟಿಯಲ್ಲಿ ಅಧಿರಕ್ಷಣಾ ಸಮಾಜ ಸೇವಾ ಸಂಸ್ಥೆ (ರಿ,)ಚಿತ್ರದುರ್ಗ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಚಿತ್ರದುರ್ಗ ಇವರ ಸಹಯೊಗದಲ್ಲಿ ಪಲ್ಸ್ ಪೋಲಿಯೊ ಕಾರ್ಯಕ್ರಮ ಮತ್ತು ಜಾಥಾ ಕಾರ್ಯಕ್ರಮದ ಪತ್ರಿಕೆಯಲ್ಲಿ ಪ್ರಕಟವಾದ ವರದಿ.**

# 2020–21ನೇ ಸಾಲಿನ ಧ್ಯೇಯೋದ್ದೇಶಗಳು

- ಅಪಹರಣಕ್ಕೊಳಗಾದ ಮತ್ತು ಸಾಗಾಣಿಕೆಗೊಳಗಾದ ಮಹಿಳೆ ಮತ್ತು ಮಕ್ಕಳ ಸಂರಕ್ಷಣೆ, ಪಾಲನೆ ಪೋಷಣೆ, ಮತ್ತು ಸಹಾಯವಾಣಿಯ ಮೂಲಕ ರಕ್ಷಣೆ ಒದಗಿಸಿ ಪುನರ್ವಸತಿ ಕಲ್ಪಿಸುವುದು.
- 'ಭೇಟಿ ಬಚಾವೋ ಭೇಟಿ ಪಡಾವೋ' ಕಾರ್ಯಕ್ರಮದಡಿಯಲ್ಲಿ ಹೆಣ್ಣು ಮಕ್ಕಳಿಗೆ ಖಡ್ಡಾಯ ಶಿಕ್ಷಣ ಕೊಡಿಸುವುದು.
- ಕೋವಿಡ್–19 ಕುರಿತು ಗ್ರಾಮೀಣ ಹಾಗೂ ನಗರ ಪ್ರದೇಶದ ಜನರಿಗೆ ಜಾಗೃತಿ ಹಾಗೂಸಂಕಷ್ಟಪರಿಸ್ಥಿತಯಲ್ಲಿರುವವರಿಗೆ ಸಹಾಯ ಮಾಡುವುದು.
- ಮಧ್ಯಪಾನ, ತಂಬಾಕು, ಬೀಡಿ, ಸಿಗರೇಟು ಸೇವನೆಯಿಂದಾಗುವ ಕ್ಯಾನ್ಸರ್ ಹಾಗೂ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವುದು.
- ಸಾಮಾಜಿಕ ಪಿಡುಗುಗಳಾದ ಬಾಲ್ಯವಿವಾಹ, ಬಾಲಕಾರ್ಮಿಕ, ದೇವದಾಸಿ ಪದ್ಧತಿ, ಹಾಗೂ ಗೊಲ್ಲರಹಟ್ಟಿಗಳಲ್ಲಿ ಮಹಿಳೆಯರ ಮಾಸಿಕ ಋತುಚಕ್ರದ ಬಗ್ಗೆ ಮೂಢನಂಬಿಕೆ ಹಾಗೂ ಕಂದಾಚಾರಗಳ ಬಗ್ಗೆ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳುವುದು.
- ವಸತಿಯುತ ಶಾಲೆ, ತರಬೇತಿ ಕೇಂದ್ರಗಳನ್ನು ಪ್ರಾರಂಭಿಸುವುದು ಸಂಸ್ಥೆಯಿಂದ ಜೀವ ಜಲ ಸಂರಕ್ಷಣೆ, ಸಸ್ಯ ಕ್ಷೇತ್ರ ಪರಿಸರ ಸ್ವಚ್ಛತೆ ಕಾರ್ಯಕ್ರಮಗಳನ್ನು ನಡೆಸುವುದು.
- ವಯೋವೃದ್ಧರ ಮತ್ತು ಅಂಗವಿಕಲರ ಅನಾಥಾಶ್ರಮ ತೆರೆದು ಅವರ ಸರ್ವತೋಮುಖ ಅಭಿವೃದ್ಧಿಪಡಿಸುವುದು.
- ಬಂಜರು ಭೂಮಿಯಲ್ಲಿ ಸಸಿಗಳನ್ನು ಬೆಳೆಸಿ ಪರಿಸರದ ಬಗ್ಗೆ ಜಾಗೃತಿ ಮೂಡಿಸುವುದು. ನೀರಿನ ಮಿತ ಬಳಕೆಯ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವುದು.
- ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರಿಗೆ ಟೈಲರಿಂಗ್, ಪೇಂಟಿಂಗ್, ಬ್ಯೂಟಿಪಾರ್ಲರ್, ಎಂಬ್ರಾಯಿಡರಿ, ಕರ ಕುಶಲ ತರಬೇತಿಯನ್ನು ನೀಡುವುದು.
- ಸಂಸ್ಥೆಯಿಂದ ಚಿತ್ರಕಲೆ, ಸಂಗೀತ ನಾಟಕ–ಲಲಿತಕಲೆಗಳಲ್ಲಿ ಶಿಕ್ಷಣ ಸೌಕರ್ಯಗಳನ್ನು ಒದಗಿಸುವುದು.
- ಸ್ಥಳೀಯ ಸಂಘಗಳು, ಸರ್ಕಾರ ಮತ್ತು ವಿದೇಶಿ ಸಂಸ್ಥೆಗಳ ಸಹಯೋಗದಲ್ಲಿ ಗ್ರಾಮೀಣ ಮತ್ತು ನಗರ ಅಭಿವೃದ್ಧಿ ಯೋಜನೆಗಳನ್ನು ಅದರಲ್ಲೂ ಬಡವರು ಮತ್ತು ಹಿಂದುಳಿದವರ ಸಾಮಾಜಿಕ–ಆರ್ಥಿಕ ಪ್ರಗತಿಗೆ ಕಾರ್ಯ ನಿರ್ವಹಿಸಿವುದು.
- ಗ್ರಾಮೀಣ & ಆದಿವಾಸಿ ಪ್ರತಿಭೆಗಳು, ಕಲೆ, ಸಂಸ್ಕೃತಿ & ಪರಂಪರೆಯನ್ನು ಉಳಿಸುವುದು ಮತ್ತು ಅಭಿವೃದ್ಧಿ ಪಡಿಸುವುದು.
- ಈ ಮೂಲಕ ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡುವುದು ಪರಿಸರ, ಭೂಮಿ ರಕ್ಷಣೆ ಮತ್ತು ಜಾಗತಿಕ ಶಾಂತಿಗಾಗಿ ಸಮುದಾಯವನ್ನು ಜಾಗೃತ ಗೊಳಿಸುವುದು ಮತ್ತು ಸಂಘಟನೆಗೊಳಿಸುವುದು.
- ಶಿಕ್ಷಣ, ಸಂಸ್ಕೃತಿ, ವಿಜ್ಞಾನ, ತಾಂತ್ರಿಕ ವಿಷಯಗಳ ಪ್ರಚಾರ ಮತ್ತು ಜ್ಞಾನಾರ್ಜನೆಗಾಗಿ ಪುಸ್ತಕ, ಜನರಲ್ಸ್, ನಿಯತಕಾಲಿಕ, ಪತ್ರಿಕೆಗಳು, ಕರಪತ್ರಗಳನ್ನು ಪ್ರಿಂಟ್ ಮತ್ತು ಪಬ್ಲಿಷ್ ಮಾಡುವುದು.
- ಸರ್ಕಾರ, ವಿಶ್ವವಿದ್ಯಾಲಯಗಳು, ವಿದೇಶದ ದೇಣಿಗೆಗಾಗಿ ಕೊರಿಕೆ ಸಲ್ಲಿಸುವುದು, ಸ್ವೀಕರಿಸುವುದು ಮತ್ತು ಸಮುದಾಯದ ಅಭಿವೃದ್ಧಿಗೆ ಬಳಸುವುದು.
- ಸಂಬಂದಿಸಿದ ದಾಖಲಾತಿಗಳನ್ನು ಸಲ್ಲಿಸುವ, ಅಡ ಇಡುವ, ಹೈಪೋಥಿಕೇಶನ್ ಮಾಡುವ ಮೂಲಕ ಸಂಸ್ಥೆಯ ಉದ್ದೇಶಗಳಿಗೆ ಅನುಗುಣವಾಗಲು ಸಾಲದ ರೂಪದಲ್ಲಿ ಹಣ ಪಡೆಯುವುದು ಅದಕ್ಕಾಗಿ ಪ್ರಾಂಸರಿ ನೋಟ್, ಬಾಂಡ್, ಬಿಲ್ಸ್ ಅಥವಾ ಸಂಭಂದಿಸಿದ ಸೆಕ್ಯೂರಿಟಿ ನೀಡುವುದು.
- ಅರಣ್ಯ, ಪರಿಸರ, ಜೀವ ವೈವಿಧ್ಯ, ತಾಪಮಾನ, ರಕ್ಷಣೆ ಮತ್ತು ಅಭಿವೃದ್ಧಿಪಡಿಸುವುದು, ಆ ಮೂಲಕ ಭೂಮಿ, ನೀರು, ಗಾಳಿ, ಮಾನವ ಮತ್ತು ಪ್ರಾಣಿ ಸಂಕುಲವನ್ನು ರಕ್ಷಣೆ ಮಾಡುವುದು. ಅಲ್ಲದೇ ಕೃಷಿ ಸಂಶೋಧನೆ, ಸಾವಯವ ಕೃಷಿ, ಸಾಂಸ್ಕೃತಿಕ ಬೀಜ ಸಂರಕ್ಷಣೆ, ಮುಂತಾದ ಕೃಷಿ ಅಭಿವೃದ್ಧಿ ಮತ್ತು ರೈತರ ಹಾಗೂ ಕೂಲಿಕಾರ್ಮಿಕರ ರಕ್ಷಣೆ–ಅಭಿವೃದ್ಧಿಗೆ ಕಾರ್ಯ ರೂಪಿಸುವುದು.